ರಿಟ್-ಅರ್ಜಿಯಲ್ಲಿ ಗೌರವ ಉಚ್ಚ ನ್ಯಾಯಾಲಯವು ನೀಡಿದ ಆದೇಶವನ್ನು ಆಧರಿಸಿ, ಮೇಲ್ಕಂಡ ರಿಟ್ ಅರ್ಜಿಗಳಲ್ಲಿ ಉಚ್ಚ ನ್ಯಾಯಾಲಯವು ನೀಡಿರುವ ತಡೆಯಾಜ್ಞೆಯನ್ನು ತೆರವು ಮಾಡಲು ಕ್ರಮವಿಡಲಾಗಿದೆ.

ಸ್ತ್ರೀಶಕ್ತಿ ಸ್ವಸಹಾಯ ಸಂಘದ ಸದಸ್ಯರಿಗೆ ತರಬೇತಿ

1392 (1773) ಶ್ರೀ ಕೆ.ಹೆಚ್.ಹನುಮೇಗೌಡ (ಹಾಸನ): ಮಾನ್ಯ ಮಹಿಳಾ ಮತ್ತು ಮಕ್ಕಳ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಜ್ಯದಲ್ಲಿ ಎಷ್ಟು ಸ್ತ್ರೀಶಕ್ತಿಯ ಸ್ವಸಹಾಯ ಸಂಘಗಳನ್ನು ಪ್ರಾರಂಭಿಸಲಾಗಿದೆ?

ಆ) ಈ ಸ್ವಸಹಾಯ ಸಂಘಗಳಿಗೆ ಸರ್ಕಾರ ಯಾವ ಯಾವ ಸಹಾಯಗಳನ್ನು ನೀಡುತ್ತದೆ.

ಇ) ಈ ಸ್ವಸಹಾಯ ಸಂಘದ ಸದಸ್ಯರುಗಳಿಗೆ ಸರ್ಕಾರ ಯಾವ ಯಾವ ರೀತಿಯ ತರಬೇತಿಗಳನ್ನು ನೀಡಿದೆ. (ವಿವರಗಳನ್ನು ನೀಡುವುದು)

ಈ) ಈ ತರಬೇತಿ ಕೊಡುವುದರಿಂದ ಸರ್ಕಾರಕ್ಕೆ ಎಷ್ಟು ಹಣ ಖರ್ಚಾಗಿದೆ (ವಿವರ ನೀಡುವುದು)?

ಶ್ರೀಮತಿ ಮೋಟಮ್ಮ (ಮಹಿಳಾ ಮತ್ತು ಮಕ್ಕಳ ಕಲ್ಯಾಣ ಸಚಿವರು):

ಅ) ರಾಜ್ಯದಲ್ಲಿ ಸ್ತ್ರೀಶಕ್ತಿ ಯೋಜನೆಯಡಿ ಒಟ್ಟು 75660 ಸ್ವಸಹಾಯ ಗುಂಪುಗಳು ರಚನೆಯಾಗಿವೆ.

ಆ) ಸ್ತ್ರೀಶಕ್ತಿ ಯೋಜನೆಯಡಿ ರಚನೆಯಾದ ಗುಂಪುಗಳಿಗೆ ಸರ್ಕಾರವು ಈ ಕೆಳಕಂಡ ಸಹಾಯಗಳನ್ನು ನೀಡುತ್ತದೆ.

ಅ. ಪ್ರತಿ ಗುಂಪಿಗೆ 5000/- ರೂ.ಮೊತ್ತದ ಸುತ್ತುನಿಧಿ.

ಆ. ಪ್ರತಿ ಗಂಪಿಗೆ 500/- ರೂ.ಮೌಲ್ಯದ ಕಿಟ್‌ಮೆಟೀರಿಯಲ್ಸ್.

ಇ. ಗುಂಪಿನ ಸದಸ್ಯರುಗಳಿಗೆ ಸಾಮರ್ಥ್ಯ ವರ್ಧನೆ, ಲೆಕ್ಕಪತ್ರ ನಿರ್ವಹಣೆ, ಆದಾಯೋತ್ಪನ್ನ ಚಟುವಟಿಕೆ ಹಾಗೂ ಸಾಮಾಜಿಕ ಪಿಡುಗುಗಳು ಈ ವಿಷಯಗಳಲ್ಲಿ ತರಬೇತಿ.

ಈ. ಆರ್ಥಿಕ ಚಟುವಟಿಕೆಗಳನ್ನು ಹಮ್ಮಿಕೊಳ್ಳಲು ಬ್ಯಾಂಕ್‌ಗಳಿಂದ ಗುಂಪುಗಳಿಗೆ ಸಾಲ ನೀಡಲು ಸಹಾಯ ನೀಡುತ್ತಿದೆ.

ಉ. ವಿವಿಧ ಇಲಾಖೆಗೆ ಸವಲತ್ತುಗಳನ್ನು ಒಮ್ಮುಖಗೊಳಿಸಿ ಗುಂಪಿನ ಸದಸ್ಯರುಗಳಿಗೆ ಸೇವೆಗಳು/ಸೌಲಭ್ಯಗಳು ದೊರಕುವಂತೆ ಮಾಡುವುದು.

ಇ) ಅ) 2000-01ರ ಸಾಲಿನಲ್ಲಿ ರಚನೆಯಾದ ಪ್ರತಿ ಗುಂಪಿನಿಂದ ಇಬ್ಬರು ಪ್ರತಿನಿಧಿಗಳನ್ನು ಆಯ್ಕೆ ಮಾಡಿ ಇವರಿಗೆ ಗ್ರಾಮೀಣ ಮಟ್ಟದಲ್ಲಿ ಸ್ವಸಹಾಯ ಗುಂಪಿನ ಪರಿಕಲ್ಪನೆ ಹಾಗೂ ಲೆಕ್ಕಪತ್ರ ನಿರ್ವಹಣೆಯಲ್ಲಿ ಒಟ್ಟು 1,10,446 ಪ್ರತಿನಿಧಿಗಳಿಗೆ 2 ದಿವಸಗಳ ಓರಿಯಂಟೇಶನ್ ತರಬೇತಿ ನೀಡಲಾಗಿದೆ.

ಆ) 2001-02ರ ಸಾಲಿನಲ್ಲಿ 11,13,056 ಗುಂಪಿನ ಸದ್ಯರುಗಳಿಗೆ ಸಾಮರ್ಥ್ಯ ವರ್ಧನೆಯ ಬಗ್ಗೆ ಅಂಗನವಾಡಿಕಾರ್ಯಕರ್ತೆಯರು ತರಬೇತಿ ನೀಡಿರುತ್ತಾರೆ. ಈತರಬೇತಿ ಕಾರ್ಯಕ್ರಮದಲ್ಲಿ ಲಿಂಗತ, ಸಂಪರ್ಕ, ಲೆಕ್ಕ ಪತ್ರ ನಿರ್ವಹಣೆ, ಮುಂದಾಳತ್ವ, ಈವಿಷಯದ ಬಗ್ಗೆ ತರಬೇತಿ ನೀಡಲಾಗಿದೆ.

ಈ) ತರಬೇತಿ ಕಾರ್ಯಕ್ರಮಕ್ಕೆ ಒಟ್ಟು 283,48 ಲಕ್ಷ ರೂ.ಗಳು ಖರ್ಚಾಗಿರುತ್ತದೆ. 2000-01ರಲ್ಲಿ ನಡೆದ ತರಬೇತಿಗೆ 207.90 ಲಕ್ಷ ರೂ.ಗಳು ಹಾಗೂ 2001-02ರ ಸಾಲಿನಲ್ಲಿ ನಡೆದ ತರಬೇತಿಗೆ 75.58 ಲಕ್ಷ ರೂ.ಗಳು ಖರ್ಚಾಗಿದೆ.

ರಾಜ್ಯದ ಹಾಪ್‌ಕಾಮ್ಸ್ ಸಂಸ್ಥೆಯ ಬಗ್ಗೆ ವಿವರಗಳು

1394 (1689) ಶ್ರೀ ಜಗದೀಶ್ ಶೆಟ್ಟರ್ (ಹುಬ್ಬಳ್ಳಿ ಗ್ರಾಮೀಣ): ಮಾನ್ಯ ತೋಟಗಾರಿಕೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಜ್ಯದ ಹಾಪ್‌ಕಾಮ್ಸ್ ಸಂಸ್ಥೆಯಲ್ಲಿ ಅವ್ಯವಹಾರಗಳು ನಡೆದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಆ) ಬಂದಿದ್ದರೆ ಇದಕ್ಕೆ ಕಾರಣರಾದ ಸಿಬ್ಬಂದಿಗಳು ಯಾರು; ಅವರ ಹೆಸರುಗಳನ್ನು ತಿಳಿಸುವುದು;

ಇ) ಸಂಸ್ಥೆಯು ಕಳೆದ ಮೂರು ವರ್ಷಗಳಿಂದ ಮಾಡಿರುವ ಲಾಭ ಮತ್ತು ನಷ್ಟವೇನು;

ಈ) ದಿನಾಂಕ 31.3.2002ಕ್ಕೆ ಈ ಸಂಸ್ಥೆಯ ಕೂಡಿಬಿದ್ದ ಹಾನಿ ಎಷ್ಟು;

ಉ) ಈ ಸಂಸ್ಥೆಯ ಆಡಳಿತ ಮಂಡಳಿಯಲ್ಲಿರುವವರ ಹೆಸರುಗಳೇನು?

ಶ್ರೀ ಎಂ.ಶಿವಣ್ಣ (ತೋಟಗಾರಿಕೆ ಸಚಿವರು):

ಅ) ಬಂದಿದೆ.

ಆ) 1. ಶ್ರೀ ಬಿ.ಎ.ಚನ್ನಪ್ಪಗೌಡ, ಹಿಂದಿನ ವ್ಯವಸ್ಥಾಪಕ ನಿರ್ದೇಶಕರು.

2. ಶ್ರೀ ಎಂ.ವಿ.ಶ್ರೀನಿವಾಸ್, ಹಿಂದಿನ ವ್ಯವಸ್ಥಾಪಕ ನಿರ್ದೇಶಕರು (ನಿಧನರಾಗಿರುತ್ತಾರೆ)

3. ಡಾ:ಡಿ.ಎಲ್. ಮಹೇಶ್ವರ್, ಹಿಂದಿನ ವ್ಯವಸ್ಥಾಪಕ ನಿರ್ದೇಶಕರು.

4. ಶ್ರೀ ಎನ್.ರಾಮಣ್ಣ, ಹಿಂದಿನ ಪ್ರಧಾನ ವ್ಯವಸ್ಥಾಪಕರು.

5. ಶ್ರೀ ಪಿ.ಎಸ್.ಶಿವಲಿಂಗಯ್ಯ, ಹಿಂದಿನ ಕಾರ್ಯನಿರ್ವಾಹಕರು, ಹಾಸನ ಶಾಖೆ.

6. ಶ್ರೀ ಪಿ.ಎಂ.ರಾಮು, ಹಿಂದಿನ ವ್ಯವಸ್ಥಾಪಕ ನಿರ್ದೇಶಕರು (ನಿವೃತ್ತ)

ಇ) ಕಳೆದ 3 ವರ್ಷಗಳ 1999-2000, 2000-2001, 2001-2002ರ ಆಡಿಟ್ ಇನ್ನೂ ಮುಗಿದಿರುವುದಿಲ್ಲ. ಆದರೆ ಸಂಸ್ಥೆಯಲ್ಲಿ ತಯಾರಿಸಿರುವ ತಾತ್ಕಾಲಿಕ ಲಾಭ ನಷ್ಟದ ತಃಖ್ತೆಯಂತೆ ಸಂಸ್ಥೆಯು ಈ ಕೆಳಕಂಡ ಲಾಭ ಹೊಂದಿರುತ್ತದೆ.

ವರ್ಷ	ಲಾಭ
1999-2000	5.91 ಲಕ್ಷ
1999-2001	7.39 ಲಕ್ಷ
2001-2002	16.65 ಲಕ್ಷ

ಈ) ಇರುವುದಿಲ್ಲ

ಉ) ಚುನಾಯಿತರು

1. ಶ್ರೀ ಎನ್.ಗೋಪಾಲಕೃಷ್ಣ, ಅಧ್ಯಕ್ಷರು
2. ಶ್ರೀ ಜಯರಾಮೇಗೌಡ, ನಿರ್ದೇಶಕರು
3. ಶ್ರೀ ವೈ.ಸೋಮಣ್ಣ, ನಿರ್ದೇಶಕರು